

ಪ್ರತಿ ಬಾರಿಯೂ ವಧುಪರೀಕ್ಷೆಯಲ್ಲಿ ನಪಾಸಾಗುತ್ತಿದ್ದ ಸುರೇಶ್ ಅವರನ್ನು ಮಂಗಳಾ ತಮಾಷೆ ಮಾಡುತ್ತಿದ್ದರು. ಒಂದೇ ದೋಣಿಯ ಪಯಣಿಗರಂತಿದ್ದ ಹಾಗೂ ಸಹೋದ್ಯೋಗಿಗಳಾಗಿ ಪರಿಚಿತರಿದ್ದ ಇಬ್ಬರಿಗೂ, ಬಾಳನೌಕೆಯಲ್ಲಿ ಜೊತೆಯಾಗಬಹುದೆಂದು ಅನ್ನಿಸಿಯೇ ಇರಲಿಲ್ಲ. 'ಇಬ್ಬರೂ ಮದುವೆ ಯಾಕಾಗಬಾರದು?' ಎಂದು ಸಹೋದ್ಯೋಗಿ ಒಬ್ಬರು ಪ್ರಶ್ನಿಸಿದಾಗ ಇಲ್ಲವೆನ್ನಲು ಇಬ್ಬರಿಗೂ ಕಾರಣಗಳಿರಲಿಲ್ಲ.

30 ಹುಡುಗಿಯರಲ್ಲಿ ತಮ್ಮ ಮಗನನ್ನು ವಿವಾಹವಾಗಲು ಕೇಳಿಕೊಂಡಿದ್ದರು. ಅವರೆಲ್ಲರೂ ಸುರೇಶ್ ಅವರನ್ನು ಮದುವೆಯಾಗಲು ನಿರಾಕರಿಸಿದರು.

'ವೊಕೇಶನಲ್ ಟ್ರೈನಿಂಗ್ ಸೆಂಟರ್'ನ ಉಳಿದ ಉದ್ಯೋಗಿಗಳು ಸುರೇಶ್ ಅವರಿಗೆ ಆತ್ಮೀಯರಿದ್ದರು. ಸುರೇಶ್ ವಿ.ಟಿ.ಸಿ. ಸೇರಿದಾಗ, ಅಲ್ಲಿ ಮಂಗಳಾ ಎನ್ನುವವರನ್ನು ನೋಡಿದ್ದರು. ಆಕೆ ಅವರಿಗಿಂತ ಮೊದಲೇ 2000 ಇಸವಿಯಲ್ಲಿ ವಿ.ಟಿ.ಸಿ. ಸೇರಿದ್ದರು. 2003ರಲ್ಲಿ, ಸುರೇಶ್ ಮತ್ತು ಮಂಗಳಾ ಇಬ್ಬರೂ ವಿ.ಟಿ.ಸಿ. ಕಚೇರಿಯಲ್ಲಿ ಜೊತೆಯಾಗಿ ಕೆಲಸ ಮಾಡುತ್ತಿದ್ದರು.

ಸುರೇಶ್ ಅವರಂತೆಯೇ ಮಂಗಳಾ ಸ್ವತಃ ಕುಷ್ಠರೋಗವನ್ನು ಎದುರಿಸಿ ಗೆದ್ದು ಪೂರ್ಣ ಗುಣವಾಗಿದ್ದರು. ಮಂಗಳಾ ಅವರ ಬದುಕು ಸುರೇಶ್ ಅವರಿಗಿಂತ ಕಠಿಣವಿತ್ತು. ಮಂಗಳಾ ಮಹಾರಾಷ್ಟ್ರದ ವಾರ್ಧಾದ ಸಣ್ಣ ಹಳ್ಳಿಯಲ್ಲಿ ಸೀಳು ತುಟಿಯೊಡನೆ ಹುಟ್ಟಿದ್ದ ಮಗು. ಅದನ್ನು ನೋಡಿ ಮಗುವನ್ನು ಅನಾಥಾಶ್ರಮದಲ್ಲಿ ಬಿಡಲು ಹೊರಟ ತಾಯಿತಂದೆಯರಿಗೆ ಯಾರೋ ಬುದ್ಧಿ ಹೇಳಿದ್ದರು. ಮಗು ಬೆಳೆದು ಶಾಲೆ ಸೇರಿತು.

1998ರಲ್ಲಿ ಮಂಗಳಾ 10ನೇ ತರಗತಿಯಲ್ಲಿ ಇದ್ದಾಗ, ದೇಹದ ಮೇಲೆ ಉಬ್ಬಿದ ಬಿಳಿಯ ಮಚ್ಚೆಗಳು ಕಂಡವು. ಕೆಲವು ತಿಂಗಳು ಕಳೆದರೂ ಅವು ಹಾಗೇ ಉಳಿದಾಗ, ವೈದ್ಯರ ಬಳಿಗೆ ಧಾವಿಸಿದರು. ವೈದ್ಯರು ಕುಷ್ಠರೋಗ ಎಂದೊಡನೆ ಮಂಗಳಾ ಅವರಿಗೆ ತಮ್ಮ ಭವಿಷ್ಯ ಕಗ್ಗತ್ತಲಾದಂತೆ ಕಂಡಿತು. ಮನಸ್ಸು ಖಿನ್ನತೆಗೆ ಜಾರಿತ್ತು. ಮನೆಯವರೊಡನೆಯೂ ಮಾತನಾಡಲಾರದಷ್ಟು ಕಡು ಮೌನ ತಳೆದಿದ್ದರು. ತಾನೇನೋ ಸಾಧಿಸಬೇಕು ಎಂದು ಹೊರಟಿದ್ದ ಉತ್ಸಾಹದ ಹುಡುಗಿ ಬದುಕಿನ ಸಂಘರ್ಷದಲ್ಲಿ ಕುಸಿದು, ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಯೋಚಿಸಿಬಿಟ್ಟಿದ್ದಳು.

ಮೂರು ವರ್ಷಗಳ ಕಾಲ ಸತತವಾಗಿ ಕೊಂಧಾಲಿಯ 'ಪ್ರೈಮರಿ ಹೆಲ್ತ್ ಸೆಂಟರ್' ಹಾಗೂ ವಾರ್ಧಾದ 'ಗಾಂಧೀ ಮೆಮೊರಿಯಲ್ ಲೆಪ್ರಸಿ ಫೌಂಡೇಷನ್'ನಲ್ಲಿ ಚಿಕಿತ್ಸೆ ಪಡೆದಾಗ ಮಂಗಳಾ ಸಂಪೂರ್ಣ ಗುಣವಾದರು. ಕೈಬೆರಳುಗಳ ನ್ಯೂನತೆ ಉಳಿದಿತ್ತು; ಪರೀಕ್ಷೆಯ ಸಮಯದಲ್ಲಿಯೇ ಕಾಯಿಲೆ ಬಿದ್ದು 12ನೇ ತರಗತಿಯಲ್ಲಿ ನಪಾಸಾದರು.

ಇಂತಹ ಸಮಯದಲ್ಲಿ ಕುಷ್ಠರೋಗದ ಹಿನ್ನೆಲೆಯಿದ್ದ ಗೆಳತಿಯೊಬ್ಬಳು ಇವರನ್ನು ಭೇಟಿಯಾಗಲು ಬಂದಳು. ಆಕೆಯ ಸೋದರ ನಾಸಿಕ್‌ನ ವಿ.ಟಿ.ಸಿ.ಯಲ್ಲಿ ಓದುತ್ತಿದ್ದ. ಮಂಗಳಾಗೆ ಅಲ್ಲಿಗೆ ಹೋಗಲು ಸಲಹೆ ಕೊಟ್ಟಳು. ಮಂಗಳಾ ನಾಸಿಕ್‌ನ ಈ ಸೆಂಟರ್‌ಗೆ ಬಂದು, 'ಸ್ಟೆನೋಗ್ರಫಿ ಮತ್ತು ಸೆಕ್ರೆಟೇರಿಯಲ್ ಪ್ರಾಕ್ಟೀಸಸ್' ಕೋರ್ಸ್ ಮಾಡಿದರು. 2005ರಲ್ಲಿ ಲೆಪ್ರಸಿ ಮಿಷನ್ ಪಶ್ಚಿಮ ಬಂಗಾಲದ ಬಂಕೂರದಲ್ಲಿರುವ ವೊಕೇಶನಲ್ ಟ್ರೈನಿಂಗ್ ಸೆಂಟರ್‌ನಲ್ಲಿ ಮಂಗಳಾ ಅವರಿಗೊಂದು ಕೆಲಸ ನೀಡಿತು. ಅಲ್ಲಿ ಕಂಪ್ಯೂಟರ್ ಇನ್‌ಸ್ಟ್ರಕ್ಟರ್ ಹಾಗೂ ಹೆಣ್ಣುಮಕ್ಕಳ ಹಾಸ್ಟೆಲ್‌ನ ವಾರ್ಡನ್ ಕೆಲಸ. ಆಗವರಿಗೆ ಬದುಕಿನಲ್ಲಿ ಹೆಚ್ಚಿನ ಅವಕಾಶಗಳ ಬಾಗಿಲು ತೆರೆಯಲು ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಬೇಕು ಅನಿಸಿತು. ಹತ್ತು ವರ್ಷಗಳ ನಂತರ ಅವರು ಮತ್ತೆ ವಿದ್ಯಾಭ್ಯಾಸವನ್ನು ಪುನರಾರಂಭಿಸಿ 12ನೇ ತರಗತಿಗೆ ದಾಖಲಾದರು. ಈ ಬಾರಿ ಶೇ. 70 ಅಂಕಗಳೊಂದಿಗೆ ಪಾಸಾದರು! ತಮ್ಮ ಸಾಮರ್ಥ್ಯದ ಬಗ್ಗೆ ಆತ್ಮವಿಶ್ವಾಸ ಮೂಡಿದ ಹೆಣ್ಣುಮಗಳು ಈಗ ಬಿ.ಬಿ.ಎ.ಗೆ (ಬ್ಯಾಚುಲರ್ ಆಫ್ ಬಿಜಿನೆಸ್ ಅಡ್ಮಿನಿಸ್ಟ್ರೇಷನ್) ಸೇರಿದರು. ಪ್ರಥಮ ದರ್ಜೆಯಲ್ಲಿ ಪಾಸಾದರು. ಪಶ್ಚಿಮ ಬಂಗಾಲದಲ್ಲಿ ಮೂರು ವರ್ಷ ಕೆಲಸ ಮಾಡಿದ ಅವರಿಗೆ ಅದೇ ಹುದ್ದೆಯಲ್ಲಿ 2008ರಲ್ಲಿ ನಾಸಿಕ್‌ನ ವಿ.ಟಿ.ಸಿ.ಗೆ ವರ್ಗವಾಯಿತು. ಅಲ್ಲಿ ಅವರಿಗೆ ಸುರೇಶ್ ಅವರೊಡನೆ ಪುನಃ ಭೇಟಿಯಾಯಿತು.

ಪ್ರತಿ ಬಾರಿ ಸುರೇಶ್, ತಾಯಿ ಹುಡುಕಿದ ಹುಡುಗಿ ತನ್ನನ್ನು ನಿರಾಕರಿಸಿದಳು ಎಂದು ಹೇಳುವಾಗ, ಮಂಗಳಾ 'ಈ ಬಾರಿಯೂ ಫೇಲ್ ಆದಿರಾ' ಎಂದು ಹಾಸ್ಯ ಮಾಡುವುದಿತ್ತು. ಮಂಗಳಾ ಅವರ ತಂಗಿಗೆ ಆಗಲೇ ಮದುವೆಯಾಗಿತ್ತು. ಆಕೆಯ ಪಾಲಕರು ಸೀಳುತುಟಿ, ಕುಷ್ಠರೋಗದ ಹಿನ್ನೆಲೆಯ ಮಗಳಿಗೆ ಗಂಡು ಸಿಗುವುದಿಲ್ಲ ಎಂದು ನೋಡುವುದನ್ನೇ ಬಿಟ್ಟಂತಿತ್ತು. ಅದೇ ಕಾರಣಕ್ಕೆ ಮಂಗಳಾ ತನ್ನ ಮದುವೆಯ ಬಗ್ಗೆ ಯೋಚಿಸಿದಂತಿರಲಿಲ್ಲ.

ಒಂದು ದಿನ ಸುರೇಶ್ 30ನೇ ಹುಡುಗಿಯೂ ತನ್ನನ್ನು ನಿರಾಕರಿಸಿದಳು ಎಂದು ಹೇಳುವಾಗ ಮಂಗಳಾ ತಮಾಷೆ ಮಾಡಿ ನಕ್ಕಿದ್ದರು. ಆಗ ಅವರ ಸಹೋದ್ಯೋಗಿ ಶ್ರೀಮತಿ ಓಮ್ನಾ ಚೆರಿಯನ್ ಇವರಿಬ್ಬರನ್ನು ನೋಡಿ 'ಅರೆ ಅವರನ್ನು ಹುಡುಗಿಯರು ನಿರಾಕರಿಸುತ್ತಾರೆ, ನಿನ್ನನ್ನು ಹುಡುಗರು ನಿರಾಕರಿಸುತ್ತಾರೆ. ನೀವಿಬ್ಬರೂ ಏಕೆ ಮದುವೆಯಾಗಬಾರದು?' ಎಂದು ಸೂಚಿಸಿದ್ದರು. ಸುರೇಶ್ ಮತ್ತು ಮಂಗಳಾ ಅಲ್ಲಿಯವರೆಗೆ ಒಳ್ಳೆಯ ಸ್ನೇಹಿತರಾಗಿದ್ದರು, ಆದರೆ ಈ ದಿಕ್ಕಿನಲ್ಲಿ ಅವರು ಯೋಚಿಸಿರಲಿಲ್ಲ. ಈಗವರಿಗೆ 'ಹೌದಲ್ಲವೆ, ತಾವೇಕೆ ಎಲ್ಲೆಲ್ಲೋ ಯಾರನ್ನೋ ಹುಡುಕುತ್ತಿದ್ದೇವೆ? ಜೀವನದಲ್ಲಿ ಸಮಾನ ಸಂಘರ್ಷಗಳನ್ನು ಎದುರಿಸಿದ ನಾವು ವಿವಾಹವಾಗುವುದು ಸೂಕ್ತ' ಅನಿಸಿತು. ಮೆಲ್ಲನೆ ಪರಸ್ಪರರಲ್ಲಿ ಅವರು ಬಯಸಿದ ಜೀವನಸಂಗಾತಿಯನ್ನು ಕಂಡರು. 2010ರ ಹೊಸ ವರ್ಷದ ದಿನ, ಸುರೇಶ್ ಮತ್ತು ಮಂಗಳಾ ತಮ್ಮ ಸಹೋದ್ಯೋಗಿಗಳ ನಡುವೆ, ಸರಳ ರೀತಿಯಲ್ಲಿ ವಿವಾಹವಾದರು.

ಮರುವರ್ಷ, 2011ರಲ್ಲಿ ಅವರಿಗೆ ಮುದ್ದಾದ ಹೆಣ್ಣುಮಗು ಹುಟ್ಟಿತು. ಕುಷ್ಠರೋಗಿಗಳಿಗೆ ಹುಟ್ಟುವ ಮಕ್ಕಳು ಕುರೂಪಿಗಳಾಗಿರುತ್ತಾರೆ ಎಂಬ ಮಿಥ್ಯೆ ಇದೆ, ಇದು ಕೂಡಾ ಸುಳ್ಳಾಯಿತು. ಸ್ಪರ್ಶ್ – ಮಗಳಿಗೆ ಅವರಿಟ್ಟ ಹೆಸರು. ಕುಷ್ಠರೋಗಿಗಳನ್ನು ಗುಣವಾದ ಮೇಲೂ ಮುಟ್ಟಿಸಿಕೊಳ್ಳಲು ಜನ ಹಿಂಜರಿಯುತ್ತಾರೆ; ಕುಷ್ಠರೋಗಿಗಳು ಸ್ಪರ್ಶಕ್ಕಾಗಿ ಹಾತೊರೆಯುತ್ತಾರೆ. ಅವರ ಬದುಕಿನಲ್ಲಿ ನಶಿಸಿಹೋಗಿದ್ದ ಸ್ಪರ್ಶ ಹಿಂತಿರುಗಿತ್ತು. ಎರಡನೇ ಬಾರಿ, 2016ರಲ್ಲಿ ಮುದ್ದಾದ ಅವಳಿ–ಜವಳಿ